ಆ) ಸಮಿತಿಯ ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ವಿಷಯ:- ಸುಳ್ಯದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 103 (658)

ಶ್ರೀ ಎಸ್.ಅಂಗಾರ (ಸೂಳ್ಯ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಒಟ್ಟು ಸಂಖ್ಯೆ ಎಷ್ಟು?

ಆ) ಅವುಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) -- ಆರು --

ಆ) ಸುಳ್ಯ ತಾಲ್ಲೂಕು ಪಂಜ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ಖಾಲಿ ಇದ್ದ ವೈದ್ಯರ ಹುದ್ದೆಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಆಕುಕ 63 ಹೆಚ್ ಎಸ್ ಹೆಚ್ 95, ದಿನಾಂಕ 102 1995 ರಲ್ಲಿ ಒಬ್ಬ ಗುತ್ತಿಗೆ ವೈದ್ಯರನ್ನು ನೇಮಕಾತಿ ಮಾಡಿ ಭರ್ತಿ ಮಾಡಲಾಗಿದೆ. ಉಳಿದಿರುವ 5 ಖಾಲಿ ಹುದ್ದೆಗಳನ್ನು ಮುಂದೆ ಸ್ನಾಕೋತ್ತರ ವ್ಯಾಸಂಗ ಮುಗಿಸಿ ಹಿಂದಿರುಗುವ ವೈದ್ಯರಿಂದ ಅಥವಾ ಗುತ್ತಿಗೆ ಆಧಾರದ ಇನ್ನೊಂದು ತಂಡದಿಂದ ನೇಮಕಾತಿ ಮಾಡಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ವಿಷಯ:- ಆರಣ್ಯ ಇಲಾಖೆಯ ಅನುಮತಿ ಇಲ್ಲದೆ ಭಾರತೀನಗರ ಮತ್ತು ಜಯಮಹಲ್ ಕ್ಷೇತ್ರದಲ್ಲಿ ಮರಗಳನ್ನು ಕಡಿದಿರುವುದು.